
ಶ್ರೀಃ



ಹರಾವಳಿಗಳು

ಶ್ರೀ. ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯ,
ಕಾಸರಗೋಡು. (ದ. ಕ.)

೧೯೪೭.

(ಚತುರ್ಥ ಮುದ್ರಣ.) ೦ - ೨ ೦.

"ಸ್ವಾತಂತ್ರ್ಯೋತ್ಸವದ ಕಾಣಿ

ಶ್ರೀ. ಮುದವೀಡು ಕೃಷ್ಣರಾಯರ

ಅಭಿಪ್ರಾಯ.

ಶ್ರೀಯುತ ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾ

ಇವರಿಗೆ

ಕಾಸರಗೋಡು

ಸಿರಿಗನ್ನಡಂಗೆಲ್ಗೆ


ಧಾರವಾ

ಪ್ರಿಯ ಮಿತ್ರರೆ,

ನೀವು ಪ್ರೀತಿಯಿಂದ ಕಳುಹಿಸಿದ 'ಸ್ವಾತಂತ್ರ್ಯೋತ್ಸ ಯ ಎರಡು ಪ್ರತಿಗಳು ಮುಟ್ಟಿದವು "ಧ್ವಜಾರೋಹಣ "ನವಭಾರತ" ಗೀತೆಯೂ ನಮ್ಮ ಸ್ವಾತಂತ್ರ್ಯದ ಸಮಗ್ರ ಇತಿಹಾಸ ಚಿತ್ರವನ್ನು ಕಣ್ಣೆದುರು ತಂದ ಪ್ರಭಾವಶಾಲಿಯಾದ ಸುಂದರವಾದ ಅಂತ ಹೊಯ್ದಾಡಿಸಿ ಬಿಡುವ ಮನೋಹರ ಕಾವ್ಯಗಳಾಗಿ ಗಾಗಿ ನಿಮಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳು. ನನ್ನ ವ ಕ್ಕಳು ಕೂಡಿ ಇವುಗಳನ್ನು ಇಲ್ಲಿ ಸ್ವಾತಂತ್ರ್ಯೋತ್ಸವದ ವಿವಿಧ ಗಳಲ್ಲಿ ಸಾಭಿನಯ ಅನ್ನತಕ್ಕವರಿದ್ದಾರೆ. ನಾನು ನಿಮ್ಮನ್ನು ಕಂಡದ್ದು ೧೯೨೩ರ ಉಡುಪಿಯ ಪರಿಷತ್ತಿನ ಕಾಲಕ್ಕೆಂದು ನೆ . . . . ಈ ದೀರ್ಘ ಕಾಲದಲ್ಲಿಯೂ ನೀವು ನನ್ನನ್ನು ಮರೆಯ ಕೃತಿಗಳ ಕಾಣಿಕೆಗಳನ್ನು ಕಳುಹಿಸಿದ್ದಕ್ಕಾಗಿ ಮತ್ತೊಮ್ಮೆ ನಿಮ್ಮ ತ್ತೇನೆ. ನಿಮ್ಮ ಕವಿಶಕ್ತಿಯು ಇನ್ನೂ ಹಣ್ಣಾಗಿ ಮಾಗಿ ಭಾರತಕ ಶ್ರೇಯಸ್ಸು ತರುವಂತಾಗಲೆಂದು ಹಾರೈಸುತ್ತೇನೆ . . . .

ಅಮ್ಮೆಂಬಳ ಶಂಕರನಾರಾಯಣ
ನಾವಡ

10 - 2 - 74



ಶ್ರೀ.
ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರು
ಕಾಸರಗೋಡು, (ದ. ಕ.)

"LEELE"

It would be the height of presumption on my part to introduce this young author **M. R. Ry. Lakshminarayana Puninchathaya Avl.**, to the public. He has carved out a niche for himself in the Modern Literature by his patriotic and soul-stirring songs such as BALGANGADHARASTAVA, GANDHI VIJAYA, SWARAJYA BHAKTOLLASA, DWAJAGEETHE, CHARAKA GEETHE, SWARAJYA GEETHE, ETC., ETC., ETC.

But here in this book of 38 Stanzas, another phase of the author's mind is revealed. Kanarese literature, which after the time of the Great **Kanaka** and **Purandar**, can boast of no devotional songs of great merit, can be said to have an asset in this author's new endeavour.

This "LEELE" speaking of the apparent contrary and contradictory life of the All Glorious Almighty puts the question often thought of by inquiring minds and never so well expressed **Why should the Just create such inequality?** The author tries for the answer in the words of the poet.

.... if .... we c

And estimate the blessing which they

.... still shall wisdom

An equal portion dealt to all ....

G

That a single sublime quality in one being ra
a higher plane making all beings equal.

Hindu religion, whose true path has been De
path of realization of Self, known to every Hindu
or illiterate, since the time of the great Epics is
forth here. THIS SONG I AM SURE, WIL
AS LONG AS THE HINDUS EXIST ON TH
OF THE WORLD.

May the Almighty reveal himself in this and
other ways and help the toiling humanity to perfe

16-12-1924.
MANGALORE

M. Anantha Shast

B

ಮುನ್ನುಡಿ

ಈ "ಲೀಲೆ"ಯನ್ನು

ನನ್ನ ಜನನೀಜನಕರಾದ ಶ್ರೀ ಸೀತಾರಾಮಚಂದ್ರರ

ದಿವ್ಯಚರಣ ಸನ್ನಿಧಿಗಳಲ್ಲಿ ಅರ್ಪಿಸಿರುವೆನು.



ಪರಮಾತ್ಮನ ಲೀಲೆಯು ಅಗಾಧವಾದುದು! ಅಪಾರಮಹಿಮನಾದ ಆ ಮಾಯಾವಿಯ ವಿವಿಧ ವಿಲಾಸವನ್ನು ಕೊಂಡಾಡುವುದಕ್ಕೆ ಸಾವಿರ ನಾಲಿಗೆಯ ಮಹಾಶೇಷನಿಂದಲೂ ಸಾಧ್ಯವಿಲ್ಲ. ಎಂದ ಮೇಲೆ ನಾನೆಂತು ವರ್ಣಿಸಲಿ?

ಕಬೀರ, ತುಕಾರಾಮ, ನಾಮದೇವ, ಕನಕ, ಪುರಂದರ, ವಿ
ಯುವರಂತೆ ನಾನು ಆ ಪವಿತ್ರ ಚರಿತ್ರನನ್ನು ಕೊಂಡಾಡುವದೆಂತು? ಅ
ಸಂತರ ಸಂಗವಾದರೂ ನನಗೆ ದೊರೆತಿರುವುದೆ? ಇಲ್ಲ. ಆದರೆ 'ಪಿತೃ
ಎಂದಿರುವುದರಿಂದ **ನನ್ನ ಪಾಲಿಗೆ** ದೇವಸಮಾನರಾಗಿಯೇ
ಪರಮಪೂಜ್ಯ ತೀರ್ಥರೂಪರವರ ಚರಣಸನ್ನಿಧಿಯಲ್ಲಿ ಅ
ಪದೇಶವನ್ನು ಕೇಳಿಕೊಂಡಿರುವ ನನಗೆ ಮತ್ತಾವ ಸಂತನ ಒಡನ
ಆಗತ್ಯವಿದೆ? ಚಿಕ್ಕಂದಿನಿಂದಲೆ ದಾಸರ ಕೀರ್ತನೆಗಳನ್ನು ಓದುವ
ಹುಟ್ಟಿಸಿ, ಕಾಲೋಚಿತ ಹಿತೋಪದೇಶಗಳನ್ನು ಮಾಡುತ್ತಿರುವ ಆ
ರೂಪರವರ ಆಶೀರ್ವಾದಪ್ರಭಾವದಿಂದಲೇ ಈ '**ಲೀಲೆ**'ಯನ್ನು ಬ
ಕಾರಣವಾಯಿತು. ಈ ಬಾಲಭಾಷಿತದಲ್ಲಿ ಏನಾದರೂ ರಸವಿ
ಅವರಿಗಲ್ಲವೆ ಆದರ ಕೀರ್ತಿಯು? ಅಲ್ಲದೆ ನನ್ನ ಅತ್ಯಂತ ಹಿತೈಷಿಗಳು ವ
ಸುಪ್ರಸಿದ್ಧ ವಕೀಲರಾದ **ಶ್ರೀಯುತ ಎಮ್. ಅನಂತ ಶಾಸ್ತ್ರಿ**
ಬಿ. ಎಲ್. ಇವರು ಅತ್ಯಾದರದಿಂದ ಇದಕ್ಕೆ ಮನೋಹರವಾದ ಮು
ಬರೆದು ಉತ್ತೇಜನವಿತ್ತುದಕ್ಕಾಗಿ ಅವರಿಗೆ ನಾನು ಸದಾ ಋಣಿಯ
ಎಂದಿನಂತೆ ಈ ನನ್ನ "**ಲೀಲೆ**"ಯನ್ನು ಅಂದವಾಗಿ ಮುದ್ರಿಸಿ,
ದಲ್ಲಾಗತಕ್ಕ ಅಖಿಲ ಭಾರತ ರಾಷ್ಟ್ರೀಯ ಸಭಾಮಹೋತ್ಸವಕಾಲ
ವಾಗಿ ಒದಗಿಸಿಕೊಟ್ಟ ಶಾರದಾ ಛಾಪಖಾನೆಯವರ ಉಪಕಾರವ
ಸ್ಮರಿಸದೆ ಇರಲಾರೆನು.

"ಸರ್ವಥಾ ನಾಸ್ತಿನಿರ್ದೋಷಂ ಸರ್ವಥಾ ನಾಸ್ತಿನಿರ್ಗುಣಂ"
ವನ್ನರಿತ ದೇಶಬಂಧುಗಳು ಹಂಸಕ್ಷೀರನ್ಯಾಯದಂತೆ ಗುಣಗ್ರಹಣ
ರೆಂದು ನಂಬಿರುವೆನು. ಇತಿ

ದೇಶದಾಸಾನುದಾಸ,

ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಂ

೧೬

ಲೀಲೆ.

(ಮಾಯಾಲೀಲೆ.)

ಧಾಟಿ—(ಕರುಣಾಕರ ನೀ ನೆಂಬುವದ್ಯಾಕೊ.)

ನರಕೇಸರಿಯೇ । ನಿನ್ನಯ ಮಾಯಾ ।
ಂತೆಯ ನಾನರಿಯೆ ‖ ಪ. ‖
ರಿಯದೆ ನಿಜವಾ । ಕುರಿಯಂತಿಹೆ! ದೇವ ।
ರಮ ಪುರುಷ ನಿನ್ನ । ಪರಿಯನು ತಿಳಿಸಯ್ಯ ‖ ಅ ಪ ‖

ಉರಗಶಯನನಾಗಿ– । ಗರುಡಗಮನನಂತೆ ।
ರಧಿಯಳಿಯನಾಗಿ– । ಮಾವನಂತೆ ‖
ರ ಭೋಗಿಯಾಗಿ–ಯೋಗಿ । ಮಾನಸಹಂಸನಂತೆ ।
ರಣಾನುರಾಗಿಯಾಗಿ– । ವಿರಾಗಿಯಂತೆ ‖ ೧ ‖

ಅಣುಮಾತ್ರನಾಗಿ- ಹೊಟ್ಟೆ । ಯೊಳಗೆ ಬ್ರ
ಘನ ವಿಶ್ವರೂಪನಾಗಿ- । 'ಕಾಣೆ'ಯಂತೆ ॥
ಗುಣಗಣಮಣಿಯಾಗಿ- । ನಿತ್ಯನಿರ್ಗುಣನಂತೆ ।
ನೆನೆದರೆ ನಿನಗೊಂದೂ । ನೆಲೆಯಿಲ್ಲವಂತೆ

ಭೂಧವನಾಗಿ ನೀನು- । ನೆಲವ ಬೇಡಿದೆಯಂತೆ
ಶ್ರೀಧರನಾಗಿ–ಬಿಕ್ಷು । ಸಖನಂತೆ ॥
ವೇದಗೋಚರನಾಗಿ - । ನೀನಗೋಚರನಂತೆ ।
ಭೇದರಹಿತ—ಪಂಕ್ತಿ । ಭೇದಕನಂತೆ ।

ಕಮಲಬಾಂಧವತೇಜ, । ಕಮಲದಳಾಕ್ಷನೆ, ।
ಕಮಲನಾಭನೆ, ಕಮ । ಲಾವರನೆ, ॥
ಸುಮಶರಜನಕನೆ, । ಸುಮನಸರೊಡೆಯನೆ,
ಸುಮಕೋಮಲನಾಗಿ— । ಬಹುಬಲನಂತೆ

ಮಾಯೆ ನಿನ್ನೊಳಗಂತೆ- । ನೀಮಾಯೆಯೊಳಗ
ಶ್ರೀಯು ನಿನ್ನೊಳು— ನೀನು । ಶ್ರೀಯೊಳಂತೆ ॥

ೀಯು! 'ಕುಸುಮ ಗಂಧ' 'ವೃಕ್ಷ-ಬೀಜ'ಗಳಂತೆ ।

ಾಯಾಪ್ರಪಂಚದೊಳು । ತವ ಬಂಧವಂತೆ ‖ ೫ ‖

೧

ಅನಿಮಿಷವರನಾಗಿ– । ಮೀನಾಗಿ ನಿಂತೆಯಂತೆ ।

೨

ನ ವಿಶ್ವಂಭರನಾಗಿ— । ಮಣ್ಣಹೊತ್ತೆ ‖

೩ ೪

ಸಚರ ಹಂದಿಯಾಗಿ— । ನರಮೃಗವಾದೆಯಂತೆ ।

ನಗೆ 'ಕಾಲಕ್ಕೆ ತಕ್ಕ । ಕೋಲ'ಗಳಂತೆ ‖ ೬ ‖

೫

ಹುಟ್ಟು ಜನ್ಮವ ಬಿಟ್ಟು । ಶರಣಗೆ ಮೋಸ ಕೊಟ್ಟು ।

೬ ೭

ುಟ್ಟುತಾಯನೆ ಕೊಂದು, । ಸತಿಯ ಬಿಟ್ಟು, ‖

೮

ಟ್ಟ ಗೋವಳನಾಗಿ, । ಶ್ರೇಷ್ಠ ಸತಿಯರನ್ನು

೯ ೧೦

ಭ್ರಷ್ಟರಾಗಿಸಿ ನಿಂತೆ । ಅಂತಕನಂತೆ ‖ ೭ ‖

ಮರೆಸಿ ವಾಲಿಯು ಕೊಂದೆ । ಶಬರಿಯೆಂಜಲ ತಿಂದೆ ।
ಕರಡಿ ಮಂಗಗಳೊಂದಿ । ಗಲೆದು ನಿಂದೆ ॥
ಕರುಣಾಭರಿತನಾಗಿ— । ಲೋಕಾಪವಾದಕಾಗಿ ।
ತರುಣಿ **'ಗರ್ಭಿಣಿ'**ಯನು । ಕಾಡಿಗೋಡಿಸಿದೆ

ಇಳೆಗೆ ನೀತಿಯ ಬೋಧಿ । ಸುವ - **ನಿನ್ನ** - **ಭೂಸತಿ** ।
ಹಲವು **ಭೂಪತಿಗಳ** । ಸತಿಯಂತೆ ॥
ಬಳಿಯೊಳರ್ಧಾಂಗಿಯಾದ । ಚಂಚಲೆ **ಶ್ರೀಸತಿ**
ಗಳಿಗೆಗೊಬ್ಬೊಬ್ಬನಿ । ಗೊಲಿಯುವಳಂತೆ

ಕ್ಷೀರ ವಾರಿಧಿಯೊಳೆ । ಮಲಗಿಕೊಂಡವನಾಗಿ— ।
ನಾರಿಗೋಪಿಯರನ್ನು । ವಂಚಿಸುತ ॥
ಕ್ಷೀರವನೊಯ್ದು ತಂದು । ಬೆಣ್ಣೆಯ ಕದ್ದು ತಿಂದು ।
ಜಾರನು — ಚೋರನೆಂದು । ಹೇಳಿಸಿಕೊಂಡೆ ॥

ಆಟ ಗೋವಳರಲ್ಲಿ । ನೋಟ ಗೋಪಿಯರಲ್ಲಿ ।
ಪಾಟ ಬೈರಾಗಿಗಳ । ಪೀಠದಲ್ಲಿ ॥

ೂಟ ಕೌರವರಲ್ಲಿ । ಕೂಟ ಪಾಂಡವರಲ್ಲಿ ।
ಾಟಕ ನಿನ್ನದು । ನೋಟಕೊಳ್ಳೆಯದು ॥ ೧೧ ॥

ನರಕೇಸರಿಯೇ –

(ಭವಲೀಲೆ.)

ವನಾಟಕವ । ಮಾಡಿದ ದೇವ ।
ವಭಯ ಪರಿ । ಹರಿಸೋ ॥ ಪ. ॥

ವನವ ಕಥೆಯಾ । ಭವರಂಗದ ಮಾಯಾ ।
ವನ – ಭುವನದಲ್ಲಿ । ಭವಿಸುವಂತೆಸಗುವ ॥ ಅ. ಪ. ॥

ತರತರದಲಿ **ನರ** । **ಗೊಂಬೆ**ಗಳನು ಮಾಡಿ ।
ರಿಪರಿಯೊಳಗವು । ಗಳ **ಕುಣಿಸಿ** ॥
ುರೆಸಿ – ಮರಸಿ, **ಮಾಯಾ** । ರಂಗದೊಳಾಡುವ ।
ರೆಯ ನಾಟಕ ಸೂತ್ರ । **ಧಾರಿ!** ಮುರಾರಿ! ॥ ೧ ॥

ರಕ್ತಮಾಂಸಗಳಿಂದ । ಮಲಮೂತ್ರಕೋಶದಿಂದ ।
ಯುಕ್ತವಾಗಿಹ — ವಾತ । ಪಿತ್ಥ - ಕಫದ ॥
ಅಸ್ಥಿಪಂಜರವನು । ಚರ್ಮಕವಚದಿಂದ ।
ಸುತ್ತಿ ಚೇತನವಿತ್ತು । ಕುಣಿಸಿ ದಣಿಸುವ

ನಿಖಿಲಾಂತರ್ಯಾಮಿಕೆ । ಸಾಕ್ಷಿಸ್ವರೂಪನೆ ।
ವಿಕಳಮತಿಗಳನು । ಪ್ರೇರಿಸುತ ॥
ಸಕಲಾನರ್ಥದ । ಕಥೆಗಳನಾಡಿಸಿ ।
ಸುಖದಿ ನೋಡುವ ನಿನ್ನ । ಲೀಲೆಯು ಸರಿಯೆ?

ಉಂಡು, ಮಲಗಿ, ಮಲ, । ಮೂತ್ರವ ಮಾಡಿಕೊಂಡ
ಗಂಡಹೆಂಡತಿ ಮರಿ । ಮಕ್ಕಳೆಂದು ॥
ಅಂಡಲೆಯುತ ಗೇಣು । ಹೊಟ್ಟೆಯ ಪಾಡಿಗಾಗಿ ।
ಗುಂಡಿಗೆ ಹೆದರದೆ । ಹೊಡೆದಾಡುತಿರುವ

ಹರಿಗಳು — ಕರಿಗಳ, । ಹುಲಿಗಳು — ದನಗಳ ।
ಗರುಡನುರಗಗಳ । ಕೊಲುವಂತೆ ।

ರು—ನರರ ಘೋರ । ಹಿಂಸೆಗೆ ಹೇಸದ ।
ಯಲಿ ಪ್ರಕೃತಿಯ । ನೋಟವನೆಸಗಿ ॥ ೫ ॥

ಘೋರ ಮಾಯಾರಂಗ । ದೊಳು ನರನಾಟವ ।
ರಿಹೃದಯದಂತೆ— । ಸಿರಿಯಂತೆ— ॥
ರಿನ ಗುಳ್ಳೆಯಂತೆ— । ತೆರೆಯಂತೆ—ಮಿಂಚಿನಂತೆ ।
ೀರಿ—ಯಡಗುವಂತೆ । ನಡೆಸುವೆಯಂತೆ ॥ ೬ ॥

ಧನವಸುಂಧರೆಯಲ್ಲಿ । ದನವು ಗೋಶಾಲೆಯಲ್ಲಿ ।
ತೆಯು ಬಾಗಿಲಲ್ಲಿ । ಮಾನವನ ॥
ಜರು ಬಂಧುಗಳು । ಘೋರ ಸ್ಮಶಾನದಲ್ಲಿ ।
ವದು ಚಿತೆಯಲ್ಲಿ । ತೊರೆವಂತೆ ವಿಧಿಸಿ ॥ ೭ ॥

ಭವನಾಟಕವ—

(ದಾ ನ ಲೀ ಲೆ.)

ಪರಮೋದಾರಿ! । ಶೋಕನಿವಾರಿ! ।
ಪೊರೆ ಕರುಣಾ । ಲಹರಿ! ॥
ಗರುಡಗಮನ ಶ್ರೀ । ವರ ಕುಂಜವಿಹಾರಿ! ।
ದುರಿತಹರಣ! ಹರಿ! । ವರದ! ವಿಠಲ! ಶೌರಿ! ॥ ಅ.

ಹರನಿಗೆ ದಯವನು, । ವಿಧಿಗೊಂದು ವಿಧಿಯನು, ।
ಸುರಪಗೆ ಭೋಗವನು । ನಾಕವನು ॥
ಸ್ಮರನಿಗೆ ರೂಪವನು, । ನರಗೆ ಪ್ರತಾಪವನು, ।
ಭರವೊಳೊದಗಿಸಿದ । ವರದಾನಂದ ॥

ಅನುಪಮ ಯಮನಿಗೆ । ದಂಡಾಧಿಕಾರವನು, ।
ಧನಪನಿಗಗಣಿತ । ಧನವನ್ನು ॥
ಅನಲಗೆ ಜ್ವಾಲೆಯನ್ನು । ಅನಿಲಗೆ ವೇಗವನ್ನು ।
ಗಣಪತಿಗಾದಿ ಪೂಜೆ । ಯನ್ನು ಪಾಲಿಸಿದ ॥

ಧರಣಿಗೆ ಕ್ಷಮೆಯನ್ನು । ತರಣಿಗೆ ತೇಜವನ್ನು ।
ಹಿಮಕರನಿಗೆ । ಕಳೆಯನ್ನು ।
ಗೆ ನಿರವಧಿ । ಗಂಭೀರತೆಯನು, ।
ಣಿಸಿ ಮೆರೆವಾ । ಕುರುಣಾವಿಭವ ॥ ೩ ॥

ರಾಗವ ಕೋಗಿಲೆಗೆ । ಭೋಗವರಗಿಳಿಗೆ, ।
ೀಗವನೆಣೆವಕ್ಕಿ । ಗಳ ಕುಲಕೆ, ॥
ೀಗೆಯ ನವಿಲಿಗೆ, । ನಡೆಯನು ಹಂಸೆಗೆ, ।
ೄವ ಗರುಡಗೆ । ದಯಪಾಲಿಸಿದ ॥ ೪ ॥

ನೇತ್ರವ ಹರಿಣಿಗೆ, । ಕಟಯನು ಕೇಸರಿಗೆ, ।
ತ್ರ ಗಭೀರತೆಯ । ವ್ಯಾಘ್ರನಿಗೆ, ॥
ತ್ರವ ನರಿಗಿತ್ತು, । ಕರವನು ಕರಿಗಿತ್ತು, ।
ಗತಿಗಳನು । ತುರಗನಿಗಿತ್ತ. ॥ ೫ ॥

ತಂಪನು ಚಂದನಕ್ಕೆ । ಸಂದ ಮಂದಾನಿಲಗೆ, ।
ಂಪನು ಸಂಪಿಗೆ । ಮಲ್ಲಿಗೆಗೆ ॥

ಇಂಪನು ಗಾಯನಕೆ, । ಝೇಂಕಾರ ತುಂಬಿಗೆ, ।
ಕಂಪನು ಕಸ್ತೂರಿಗೆ । ಕೊಟ್ಟು ಶೋಭಿಸುವ ॥

ಆಧಾರವಿಲ್ಲದೆ । ಹಾರುವ ಪಕ್ಷಿಗಳಿ ।
ಗಾಧಾರನಾಗಿ ನಡೆ । ಯಿಸುತಿರುವ ॥
ಊರ್ಧ್ವಗತಿಯ ಗಾಳಿ । ಯಾಧಾರವಿಲ್ಲದ ।
ವಾರ್ಧಿಯೊಳಗೆ ಮೀನು । ಗಳ ಬದುಕಿಸುವ ॥

ಜನನಿಯ ಜಠರದ । ಪಿಂಡಕೆ ತಿಂಡಿಯ ।
ಬನದೆ ನಿದ್ರಿಸುವಜ । ಗರಗನ್ನವ, ॥
ಘನ ಕವಚದ ಯೆಳ । ನೀರಿಗೆ ಜಲವ, ।
ವನಜದೊಳಗೆ ಮಕ । ರಂದವ ಸುರಿವ ॥

ಕಡಲಡಿಯಲ್ಲಿ ಮುತ್ತು । ಗಳನುಂಟುಮಾಡುವ, ।
ಜಡಿಧಿಯ ತಡೆಗಟ್ಟಿ । ಬಂಧಿಸಿರುವ, ॥
ಉಡುಗಳನೆತ್ತಿ ಹಿಡಿ । ಯುವ ಕರವುಳ್ಳವ ।
ಹಿಡಿದು ಗಗನವನು । ತಡೆದು ನಿಲ್ಲಿಸುವ ॥

ಮದ್ದಿನ ಗುಣವನು । ಕಾಡುಸೊಪ್ಪುಗಳಲ್ಲಿ ।
ುದ್ದು ನುಡಿಯು ಸವಿ । ಕಂದರಲ್ಲಿ ॥
ದ್ದಸರಿಗೆಯುಲಿ । ಗಾನ ಮಾಧುರ್ಯವ, ।
ದ್ಧ ಕಲ್ಲಲಿ ವಜ್ರ । ತೇಜವನೀವ ॥ ೧೦ ॥

ಮಳೆಯನು - ಬೆಳೆಯನು, । ಜಲವನು - ಫಲವನು, ।
ಲವನು — ಗೆಲವನು, । **ಸಕಲವನು** ॥
ಿದಿಳೆಗಿತ್ತು ನಿತ್ಯ । ಭಕ್ತವರದನಾಗಿ ।
ಳಗುವ ಪರಮಾತ್ಮ । ಲೋಕಾಭಿರಾಮ ॥ ೧೧ ॥

ಸಕಲ ಭುವನಪಾಲ! । ಪಾವನವನಮಾಲ! ।
ಖಿಲ ದನುಜಕುಲ । ಕಾಲಬಲ! ॥
ಕುಟಿಲ! ಸದಮಲ । ಶೀಲ! ನೀರದನೀಲ! ।
ಕಸಿತ ಲೀಲಾ । ಲೋಲ ವಿಶಾಲ ॥ ೧೨ ॥

ಶಂಖ ಚಕ್ರಕರ! । ಪದ್ಮ ಗದಾಧರ! ।
ಂಕಟಸಂಹರ! । ಅಭಯಕರ! ॥

ಕಿಂಕರಸುಖಕರ! । ವೈರಿಭಯಂಕರ ।
ಶಂಕರ ಪ್ರಿಯಕರ । ಸಕಲಾಧಾರ ॥ ೧೩

ವೇದವ[೧] ಸಲಹಿದ, । ಗಿರಿಯನುದ್ಧರಿಸಿದ,[೨] ।
ಮೇದಿನಿಗಭಯವ[೩] । ಪಾಲಿಸಿದ, ॥
ಸಾಧು ಬಾಲನಕಾಯ್ದ,[೪] । ಬಲಿಭಯಹರಿಸಿದ,[೫] ।
ಯೋಧಪಾರ್ಥಿವರಿಗೆ[೬] । ಮೋಕ್ಷವನಿತ್ತ ॥ ೧೪

ದಶಮುಖಮರ್ದನ,[೭] । ಕಂಸವಿದಾರಣ,[೮] ।
ವಿಷಮತ್ರಿಪುರಸಂ[೯] । ಹರಣ ಗುಣ, ॥
ಅಸಮನೀಚ[೧೦] ಮ್ಲೇಂ । ಛಾಂಕುರ ಭಂಜನ ।
ಅಸುರಾರೀ! ಭೋ! । ದಶಾವತಾರಿ ॥ ೧೫

ಅಳೆದೆಳೆದಿಳೆಯನು, । ಶರಣನ ಮೆಟ್ಟ, ಕಲ್ಲ ।
ನೆಯನ್ನಾಗಿ ಮಾಡಿ, । ವಿಷಧರನ ॥
ದ ವಿಷದ — ಗಂಗಾ । ವಿಷದ ಶೀತಲಪಾದ ।
ರುಹಂಗಳ ನೆನೆ । ದರೆ ಭಯವುಂಟೆ? ॥ ೧೬ ॥

ದೇವನೆ ನಿನ್ನಯ । ನಾಮವ ನುತಿಸಿದ ।
ವಾಲ್ಮೀಕಿ, ಅ । ಜಾಮಿಳರು, ॥
ೀವಿದ ಕನಕ, ಕ । ಬೀರಾದಿಗಳೂ ।
ರನರಾದರು । ದೀನಾಧೀನ ॥ ೧೭ ॥

ಶರಣ ಪ್ರಹ್ಲಾದನಿಗೆ । ಪ್ರಹ್ಲಾದ ಕರನಾದೆ, ।
ಳ ಧ್ರುವಗೆ — ಧ್ರುವ । ಪದವನಿತ್ತೆ, ॥
ಯ ಕಾಯಲಿಕಾದೆ, । ಬಲಿಯ ಬಾಗಿಲಿಗಾದೆ, ।
ಳಿ ಪಾಂಚಾಲೆಗೆ । ಬೆಂಬಲನಾದೆ ॥ ೧೮ ॥

ದೀನರೊಡೆಯ ನೀನು । ದೀನರೊಡೆಯ ನಾನು ।
ನಹಸ್ತನು ನೀನು — । ನನ್ನಂತೆಯೆ ॥

ಮಾನವಂತನು ನೀನು — ಮಾನವ ತನು ನಾನು ।
ನೀನು ಲಕ್ಷ್ಮೀಶನಂತೆ । ಲಕ್ಷ್ಮೀಶ ನಾನು ॥ ೧೯

ನೀನು ನನ್ನವನೆಂದು । ಭಾವಿಪೆ ಪರಮಾತ್ಮ ।
ನಾನು ನಿನ್ನವನೆಂದು । ಭಾವಿಸಯ್ಯ ॥
ನೀನು - ನಾನೆಂಬಾ । ಭೇದವನೆಣಿಸದೆ ।
ದೀನದಾಸನ ಕಾಯೋ! ದೇವ! ಲಕ್ಷ್ಮೀಶ! ॥ ೨೦

ಪರಮೋದಾರಿ!

ಮಂಗಳಂ.



ದಶಾವತಾರಸ್ತವ.

(ಇರುವನೆ ಪರಮಾತ್ಮ?) ಎಂಬಂತೆ.

ಹರಿಯನು ನೆನೆಮನವೇ!–। ದಯಾಲ ।
ಯನು–ನೆನೆಮನವೇ!– ॥ ಪ. ॥
ಯನು–ಸುಖದೈ । ಸಿರಿಯನು—ನಂಬಿದ ।
ಯನು ಸಲಹಿದ–। ವರನರಹರಿಯನು–॥ ॥ ಅ. ಪ. ॥

ವೇದವನುದ್ಧರಿಸಿ–। ಗಿರಿಯನು । ಮೋದದೊಳಾದರಿಸಿ–।
ೀದಿನಿಯನು ಪೊರೆ । ದಾದರದಿಂ–ಪ್ರ ।
ಲ್ಲಾದಗೆ ಪರಮಾ । ಹ್ಲಾದವನೆಸಗಿದ–॥ ॥ ೧ ॥

ಬಲಿಯೆಡೆಯನು ತುಳಿದು–। ಪಾರ್ಥಿವ । ಕುಲವನವನು ಕಡಿದು-।
ಲದಶಕಂಠನ । ತಲೆಗಳ ಖಂಡಿಸಿ–।
ಿಯ ಪಾರ್ಥನಿಂ । ಗೊಲಿದಾ–ವರದ– ॥ ೨ ॥

ಬತ್ತಲೆಯಲಿ ನಿಂದು । ತ್ರಿಪುರರ । ಸತ್ವವ ಮುರಿದಂದು–।
ತ್ತ ಮ್ಲೇಂಛರಾ । ನೆತ್ತರ ಚೆಲ್ಲಿದ–।
ತ್ತವತಾರವ । ನೆತ್ತಿದ ಶಕ್ತಿಯ– ॥ ೩ ॥

ನಂಬುಗೆ.

(ರಾಗ ಕಾಂಭೋಧಿ; ಝಂಪೆ ತಾಳ.)

ನಂಬಿದವರನು ಬಿಡನು ದೇವ ಸಲಹುವನು ‖ ಪ
ಬೆಂಬಿಡದೆ ಪೊರೆಯುವನು ದೀನಬಾಂಧವನು! ‖ ಅ. ಪ

ವಿಶ್ವವನು ಧರಿಸಿ ಮೆರೆಯುವನು ವಿಶ್ವಂಭರನು ।
ವಿಶ್ವಜಗದಾಧಾರನಾಗಿ ನಿಂದಿಹನು ‖
ವಿಶ್ವಭಾರವನವನ ಮೇಲಿರಿಸಿದರೆ ತಾನು ।
ವಿಶ್ವಾಸವಿಟ್ಟವರ ಕೈಬಿಡುವನೇನು? ‖

ಸರ್ವಕಾಲಗಳಲ್ಲಿ ಸರ್ವಕಾರ್ಯಗಳಲ್ಲಿ ।
ಸರ್ವಾತ್ಮನೊಬ್ಬನಿರುವನು ಸರ್ವರಲ್ಲಿ ‖
ಸರ್ವಶಕ್ತನ ಸೂತ್ರದಂತೆಸೆವ ಧರೆಯಲ್ಲಿ ।
ಸರ್ವೇಶನಂ ನಂಬದರಿಗೆ ಗತಿಯೆಲ್ಲಿ? ‖

ಶರಣರಾ ಸುಖದುಃಖ ಮಾನಾಪಮಾನಗಳು ।
ಶರಣರಕ್ಷಣಪದಾರ್ಪಣವೆಂದು ಬಿಡಲು ‖
ಶರಣರಿಗೆ ಶರಣಾಗಿ ಶರಣರಕ್ಷಕನಿರಲು ।
ಶರಣರಲಿ ಚಿಂತೆ ಮತ್ತೇಕೆ ಭಾವಿಸಲು! ‖

ಬಂಧು ಕುಲ ಬಲವೆಂದು ಧನಧಾನ್ಯ ಫಲವೆಂದು ।
ಂದುಮುಂದರಿಯದನ್ಯರ ನಂಬಿ ನಿಂದು ॥
ಂದಾದರೂ ಜಗದ್ರಕ್ಷಕನ ನಂಬುಗೆಯು ।
ಂದಿಕ್ಕಲಾಗದಾಗಲೆ ಭಕ್ತವಿಜಯ ॥ ೪ ॥

ಕಾಲಗತಿ ವಿಧಿಯವಿಧಿ ದೈವಬಲ ಕರ್ಮಫಲ ।
ಲಾಪ್ರಪಂಚನಾಟಕದಾಟವೆಲ್ಲ! ॥
ಲೋಕದೊಳಗೆ ಬಪ್ಪದು ತಪ್ಪದೆಂದಾಡಿ ।
ೀಳಿಡುವರೇಕೆ ನಂಬಿಕೆಯ ಮರೆಮಾಡಿ ॥ ೫ ॥

ಯಾರು ಕೈಬಿಟ್ಟರೂ ಬಿಡಲಿ ಬಂದುದು ಬರಲಿ ।
ಾರಿಂದಲೇನಹುದು ಮರ್ತ್ಯಲೋಕದಲಿ? ॥
ಾರುಣ್ಯನಿಧಿಯ ನಂಬಿದ ದೀನದಾಸರಿಗೆ ।
ಾರ ಹಂಗೇಕೆ ನಿಜ ಕರ್ಮವೀರರಿಗೆ? ॥ ೬ ॥

ಪರಮಾತ್ಮನಲ್ಲಿ ಭರವಸವಿಟ್ಟು ಸರ್ವವನು ।
ರಮಾತ್ಮಪಾದಕರ್ಪಿಸಿ ನಡೆವ ನರನು ॥
ರಮ ಪದವನು ಪಡೆದು ನಿಷ್ಕಾಮನೆನಿಸುವನು ।
ರದ ಜಯಲಕ್ಷ್ಮೀಶ ದಾಸನಾಗುವನು! ॥ ೭ ॥

Printed at the Dharma Prakash Press, Mangalore,
P. I C. S. K. NO 35, 20-12-1947.

ಶ್ರೀ.

ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರಿಂದ ರಚಿತವಾ
"ರಾಷ್ಟ್ರಗೀತಾ ರತ್ನಾಕರ"— "ಲೀಲೆ"—"ಹರಿಜನಸಂಧಾನ"
ಅಭಿಪ್ರಾಯ.

"ಪ್ರಾಕ್ತನ ವಿಮರ್ಶ ವಿಚಕ್ಷಣ"—"ಕರ್ನಾಟಕ ಪ್ರಾಚ್ಯ ವಿದ್ಯಾವೈಭವ"
"ಮಹಾ ಮಹೋಪಧ್ಯಾಯ" ರಾವ್ ಬಹದ್ದೂರ್

ಆರ್. ನರಸಿಂಹಾಚಾರ್ಯ ಎಮ್. ಎ. ಎಮ್. ಆರ್. ಎ. ಎ

ಇವರು ಬರೆಯುತ್ತಾರೆ:— * "ರಾಷ್ಟ್ರಗೀತಾರತ್ನಾಕರ," "ಲೀಲ
ಈ ಗ್ರಂಥಗಳನ್ನು ಓದಿದೆನು. ಮೊದಲನೆಯದು ನಿಮ್ಮ ದೇಶಾಭಿಮಾನವ
ಘಂಟಾಘೋಷವಾಗಿ ಕನ್ನಡಿಗರಿಗೆ ಪ್ರಕಟಿಸುವುದಲ್ಲದೆ ಅವರಿಗೆ ದೇಶದಲ್ಲಿಯ
ದೇಶಬಾಂಧವರಲ್ಲಿಯೂ ಆದರವನ್ನು ಹುಟ್ಟಿಸುವುದಕ್ಕೆ ಮುಖ್ಯವಾದ ಉ
ರಣವಾಗಿದೆ. ಕವಿತೆಯೂ ಸರಳವಾಗಿ ಹೃದಯಂಗಮವಾಗಿದೆ. ಲೀ
ಯಲ್ಲಿ ನಿಮ್ಮ ಭಕ್ತಿ ರಸವು ತುಂಬಿ ತುಳುಕುತ್ತಿರುವುದು. ಗಂಭೀರವಾದ ಭ
ಗಳನ್ನು ಸುಲಭವಾದ ಶೈಲಿಯಲ್ಲಿ ಮನೋರಂಜಕವಾಗುವಂತೆ ತಿಳಿಸುವು
ಸುಲಭ ಸಾಧ್ಯವಲ್ಲ. ಈ ಕೆಲಸವನ್ನು ನೀವು ಲೀಲಾಜಾಲವಾಗಿ ಮಾಡಿರು
ಈ ಸರಸ ಕವಿತಾಶಕ್ತಿ ಶ್ಲಾಘಾರ್ಹವಾಗಿದೆ." * ತಮ್ಮಿಂದ ರಚಿತವ
ಜಯಗೀತೆ, ವಿಠಲವಿಯೋಗ ಮುಂತಾದ ಕವಿತೆಗಳನ್ನು ಆಗಾಗ್ಗೆ
ಸಂತೋಷಪಟ್ಟೆನು. ತಾವು ಬರೆದಿರುವ ಗ್ರಂಥಗಳೆಲ್ಲಾ ತಮ್ಮ ಭಾಷಾಪ್ರ
ದೇಶ ಪ್ರೀತಿಗಳನ್ನು, ವ್ಯಕ್ತಗೊಳಿಸುತ್ತವೆ.

ಪ್ರಕೃತವಲ್ಲಿ ತಾವು ಬರೆದಿರುವ **'ಹರಿಜನಸಂಧಾನ'**ವನ್ನು
ಸಂತೋಷಪಟ್ಟೆನು. ಇದರಿಂದ ತಮ್ಮ ಹೃದಯದ ಆರ್ದ್ರತೆಯೂ ದ
ದಯಾಳುತ್ವವೂ ಒಡೆದು ಮೂಡಿ ತೋರುತ್ತವೆ. ಹರಿಜನೋದ್ಧಾರವು ಹಿಂ
ಗಳ ಕರ್ತವ್ಯವೆಂಬುವದರಲ್ಲಿ ಯಾವ ಸಂದೇಹವೂ ಇಲ್ಲ. ಕ್ರಮಕ್ರಮವಾ
ಈ ಜನರನ್ನು ಮೇಲಕ್ಕೆ ತರುವುದು ಅವಶ್ಯಕ. ದೇವಾಲಯ ಪ್ರವೇಶದ ವಿಷ

ಠಿಸಾತ್ರ ಭಿನ್ನಾಭಿಪ್ರಾಯಗಳಿವೆ. ಮಿಕ್ಕ ವಿಷಯಗಳಲ್ಲೆಲ್ಲಾ ಅಭಿಪ್ರಾಯವು ಮುಖವಾಗಿಯೇ ಇರುವುದರಿಂದ ಯಾವ ವಿಧವಾದ ತೊಂದರೆಗೂ ಅವಕಾ ಲ್ಲ ತಾವು ಮಾಡುತ್ತಿರುವ ಕೆಲಸವು ಸ್ತುತ್ಯವಾಗಿಯೂ ಶ್ಲಾಘನೀಯ ಯೂ ಇದೆ

ರು ಆಸ್ಥಾನ ಮಹಾವಿದ್ವಾನ್ ಸೋಸಲೆ ಅಯ್ಯಾಶಾಸ್ತ್ರಿ, 'ಕವಿತಿಲಕ'

ಇವರು ಬರೆಯುತ್ತಾರೆ:—

“. . . . ತಾವು ಕಳುಹಿಸಿ ಕೊಟ್ಟ ರಾಷ್ಟ್ರ ಗೀತಾವಳಿ ಯೆಂಬ ಪುಸ್ತಕ ಆಮೂಲಾಗ್ರವಾಗಿ ನೋಡಿದೆನು. ಈ ಗ್ರಂಥದ ಕವಿತಾಸರಣಿಯು ಘ್ಯವಾಗಿರುವುದು. ಭಾಷಾಶೈಲಿಯು ಲಲಿತವಾಗಿಯೂ ಗತವಾಗಿಯೂ ಇರುವುದು. ಹೀಗಿರುವುದರಿಂದ ಇದು ಲಕ ಬಾಲಿಕೆಯರ ಪಠನಕ್ಕೆ ಯೋಗ್ಯವಾಗಿರುವುದಲ್ಲದೆ ರತೀಯರು ಭಾರತಮಾತೆಯ ಸೇವೆಯನ್ನು ಮಾಡಬೇಕೆಂಬ ಯದಲ್ಲಿ ಪ್ರಾಮುಖ್ಯವನ್ನು ಪಡೆದಿರುವುದು. . . . . . .”

ಇದರೊಡನಿರುವ ಲೀಲೆ ಎಂಬ ಪುಸ್ತಕವೂ ಸಹ ಇದ ತೆಯೆ ಅಭಿನಂದನೀಯವಾಗಿರುವುದು. . . . . .”

ಶ್ರೀ. ಪುಣಿಂಚತ್ತಾಯರ

(೧) “ಲೀಲೆ”

(೨) “ಸ್ವರಾಜ್ಯ ಗೀತಾಮೃತ” (ಪ್ರಥಮ ಭಾಗ)

(೩) “ಸ್ವರಾಜ್ಯ ಗೀತಾಮೃತ” (ದ್ವಿತೀಯ ಭಾಗ)

ರೆಯುವ ಸ್ಥಳ:—ಭಕ್ತ ಬ್ರದರ್ಸ್—ಕಾಸರಗೋಡು (ದ. ಕ.)

ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ (ಬೆಂಗಳೂರು):—

1. ರಾಷ್ಟ್ರಗೀತಾರತ್ನಾಕರ. 2. ಸ್ವರಾಜ್ಯಗೀತೆ. 3. ಲೀಲ

“... ಈ ಮೂರು ಪುಸ್ತಕಗಳೂ ಪ್ರಸಿದ್ಧರಾದ ಮಂಗಳೂರಿನ ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರವರಿಂದ ರಚಿತವಾದುವು. ಇವರು ರಾಜಕೀಯ ವಿಷಯವಾಗಿ ಸುರಸವಾದ ಅನೇಕ ಕವಿತೆಗಳನ್ನು ಬರೆದು ಪ್ರಕಾಶಗೊಳಿಸಿ ಜನರಲ್ಲಿ ದೇಶಭಕ್ತಿಯನ್ನು ಹುಟ್ಟಿಸಲು ಮಾಡುತ್ತಿರುವ ಪ್ರಯತ್ನವು ಶ್ಲಾಘ್ಯವಾದುದೇ ಸರಿ. ಇವರ ಭಾಷೆಯು ಸುಲಭವಾಗಿಯೂ ಲಲಿತವಾಗಿಯೂ ತಿಳಿಗನ್ನಡವಾಗಿಯೂ ಇದೆ. . . .”

“ಜಯ ಕರ್ಣಾಟಕ” (ಧಾರವಾಡ):—

(ಸಂಪಾದಕರು ಶ್ರೀ. ಆಲೂರು ವೆಂಕಟರಾಯರು)

“. . . . ಇನ್ನೊಂದು ಮಹತ್ವದ ಮಾತು. ಅಸಹಯೋಗವು ಆರಂಭಿಸಿದ ನಂತರ ರಾಷ್ಟ್ರೀಯ ಪದ್ಯಗಳ ವಾಙ್ಮಯವನ್ನು ಕರ್ಣಾಟಕದಲ್ಲಿ ಮುಖ್ಯವಾಗಿ ಮಂಗಳೂರು ಧಾರವಾಡಗಳು ಮೊದಲುಮಾಡಿವೆ. ಇವೆರಡರಲ್ಲಿ ಮಂಗಳೂರೇ ಮುಂದೆ. ಬಹುತರವಾಗಿ ಅಲ್ಲಿಯ ಎಲ್ಲ ಪದ್ಯಗಳನ್ನು ಪ್ರಸಿದ್ಧಿಸಿದವರು ಅಲ್ಲಿಯ ಶ್ರೀಮಂತರಾದ ಶ್ರೀ. ಪುಣಿಂಚತ್ತಾಯರೇ. ಇವರ ರಾಷ್ಟ್ರವಾಙ್ಮಯ ಪ್ರೇಮವನ್ನು ನೋಡಿ ಕರ್ಣಾಟಕದ ಇತರ ಶ್ರೀಮಂತ ಜನರೂ ಇಂಥ ಕೆಲಸಗಳಿಗೆ ಮೊದಲುಮಾಡಿದ ದಿನವೇ ಸುದಿನವು.